ಕಲ್ಲುಗಣಿ ಗುತ್ತಿಗೆ ನೀಡುವುದು

2684(3172) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ 20 ವರ್ಷಗಳಿಂದ (ಎಂಎಂಎಲ್) ಮೈಸೂರು ಮಿನರಲ್ಸ್ ಸಂಸ್ಥೆ ಪಡೆದ ಲೈಮ್‌ಸ್ಟೋನ್ ಮತ್ತು ಡೋಲೋಮೈಟ್ ಕಲ್ಲುಗಣಿ (ಮೈನಿಂಗ್ ಲೀಸ್) ಗುತ್ತಿಗೆ ವ್ಯಾಪ್ತಿಯ ಕ್ಷೇತ್ರವನ್ನು ಎಂ.ಎಂ.ಎಲ್. ಸಂಸ್ಥೆಯಿಂದ ಬಿಡಿಸಿ ಖಾಸಗಿ ಜನರಿಗೆ ಅಥವಾ ಜಮೀನು ಮಾಲೀಕರಿಗೆ ಕಲ್ಲುಗಣಿ ಗುತ್ತಿಗೆ ನೀಡುವ ಯೋಜನೆ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಲೈಮ್‌ಸ್ಟೋನ್ ಮತ್ತು ಡೋಲೋಮೈಟ್ ಏನಿಜವಿರುವ ಯಾವ ಯಾವ ಗ್ರಾಮಗಳ ಯಾವ ಯಾವ ಜಮೀನುಗಳನ್ನು ಎಂ.ಎಂ.ಎಲ್. ಸಂಸ್ಥೆಯಿಂದ ಬಿಡಿಸಿ ಗಣಿ ಗುತ್ತಿಗೆ ನೀಡಲಾಗುವುದು? (ವಿವರ ನೀಡುವುದು)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಆ) ಮೆ: ಎಂ.ಎಂ.ಎಲ್ ಸಂಸ್ಥೆಯವರು ಲೈಮ್‌ಸ್ಟೋನ್ ಮತ್ತು ಡೋಲೋಮೈಟ್ ಗುತ್ತಿಗೆ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರವನ್ನು ಜಮೀನಿನ ಮಾಲೀಕರೇ ತಮಗೆ ಗಣಿ ಗುತ್ತಿಗೆ ನೀಡಬೇಕೆಂದು ಕೇಳಿದಾಗ, ಮೆ: ಎಂ.ಎಂ.ಎಲ್. ಸಂಸ್ಥೆಯವರ ಅಭಿಪ್ರಾಯ ಪಡೆದು ಜಮೀನು ಮಾಲೀಕರಿಗೆ ನಿಯಮಾನುಸಾರ ಗಣಿ ಗುತ್ತಿಗೆ ನೀಡುವ ಯೋಜನೆ ಇದೆ.

ಅ) ವಿವರಗಳು ಈ ಕೆಳಕಂಡಂತಿವೆ.

ಸರ್ವೆ ನಂ.	ಗ್ರಾಮ	ತಾಲ್ಲೂಕು	ವಿಸ್ತೀರ್ಣ (ಎಕರೆಗಳಲ್ಲಿ
54	ಮುದ್ದಾಪುರ	ಮುಧೋಳ್	12-00
55 ಮತ್ತು 56	ಮುದ್ದಾಪುರ	ಮುಧೋಳ್	12-00
52	ಮುದ್ದಾಪುರ	ಮುಧೋಳ್	12-00
34:2ಎ	ನಾಗನಪುರ	ಮುಧೋಳ್	6-00